

ಲಡಾಖ್‌ನ ಕಾರ್ಗಿಲ್ ಜಿಲ್ಲೆಯಲ್ಲಿ ಹರಿಯುವ ಝುಂಸ್ಕಾರ್ ನದಿ ಚಳಿಗಾಲದಲ್ಲಿ ಹೆಪ್ಪುಗಟ್ಟುತ್ತದೆ. ಡಿಸೆಂಬರ್‌ನಿಂದ ನಿಧಾನಕ್ಕೆ ಆರಂಭವಾಗುವ ಈ ಹಿಮಗಟ್ಟುವ ಪ್ರಕ್ರಿಯೆ ಜನವರಿ ಮುಗಿಯುವ ಹೊತ್ತಿಗೆ 'ಮಂಜಿನ ದಾರಿ'ಯಾಗಿ ಬದಲಾಗುತ್ತದೆ. ಕೆಲವೆಡೆ ಹತ್ತು ಟನ್ ಭಾರದ ಟ್ರಕ್ ಹೋದರೂ ಮಿಸುಕಾಡದಷ್ಟು ಗಟ್ಟಿಯ ಹಾಸು! ಝುಂಸ್ಕಾರ್ ಹಿಮನದಿಯ ಮೇಲೆ ಕೈಗೊಳ್ಳುವ ಪಯಣ ಮೈಮನಗಳೊಳಗೆ ನದಿಯೊಂದು ಹರಿದಂತೆ ರೋಮಾಂಚನ ಹುಟ್ಟಿಸುತ್ತದೆ.

■ ಚಿತ್ರ-ಲೇಖನ: ಶ್ರೀನಿಧಿ ಡಿ.ಎಸ್.

**ಕಾ**ಲ ಕೆಳಗೆ ಮಂಜುಗಟ್ಟಿದ ನದಿ. ಇಕ್ಕೆಲಗಳಲ್ಲೂ ಕಡಿದಾದ ಬೆಟ್ಟಗುಡ್ಡಗಳು. ಹೊತ್ತು ಗೊತ್ತಿಲ್ಲದೇ ಆರಂಭವಾಗುವ ಹಿಮಪಾತ. ಅದಾವುದೋ ವಿಸ್ಮಯದ ಗಳಿಗೆಯಲ್ಲಿ ಹರಿವು ನಿಲ್ಲಿಸಿ ಹೆಪ್ಪುಗಟ್ಟಿ ನಿಂತಿರುವ ಜಲಪಾತಗಳು. ಧುತ್ತನೆ ಕಡಿದಾದ ಪರ್ವತದ ಇಳಿಜಾರಿನಲ್ಲಿ ಕಾಣುವ ಬೆಟ್ಟದ ಕುರಿಗಳು. ತಣ್ಣಗೆ ಕೊರೆಯುವ ಶೀತಮಾರುತ, ನೋಡ ನೋಡುತ್ತಿದ್ದಂತೆ ಕವಿಯುವ ಮೋಡ, ಘಟಘಟನೆ ಸುರಿದು ಮರೆಯಾಗುವ ಮಳೆ. ಸೂರ್ಯರಶ್ಮಿಗೆ ಫಳ್ಳನೆ ಹೊಳೆಯುವ ಹಿಮಸಲಾಕೆಗಳು. ಯಾವುದೋ ಮಾಯಾಲೋಕದಲ್ಲಿ ನಡೆಯುತ್ತಿದ್ದೇವೋ ಅಥವ ಯಾರದೋ ಕನಸಿನೊಳಗೆ ಸಾಗುತ್ತಿದ್ದೇವೋ ಎಂದೆನ್ನಿಸುವ ಪರಿಸರ. 30 ಡಿಗ್ರಿಯಿಂದ 10 ಡಿಗ್ರಿಯವರೆಗಿನ ಕಡು ತಣ್ಣಗಿನ ಹವಾಮಾನ. ಝುಂಸ್ಕಾರ್ ಎನ್ನುವ ಕಣಿವೆಯೊಳಗಣ ಚಾದರ್ ಎಂಬ ಹಿಮನದಿಯ ಮೇಲಿನ ನಡಿಗೆ, ಒಂದು ರಮಣೀಯ ಅನುಭವ.

ಜಮ್ಮು ಕಾಶ್ಮೀರದ ಲಡಾಖ್ ಪ್ರಾಂತ್ಯ ಸದಾಕಾಲ ಹಿಮಾವೃತ. 1970ರ ದಶಕದ ನಂತರ ಪ್ರವಾಸಿಗರಿಗೆ ತೆರೆದುಕೊಂಡಿರುವ ಈ ತಾಣಕ್ಕೆ, ಪ್ರತಿ ವರ್ಷ ಲಕ್ಷಾಂತರ ಮಂದಿ ಪ್ರಕೃತಿ ಸೌಂದರ್ಯ ಸವಿಯಲೆಂದು ಆಗಮಿಸುತ್ತಾರೆ. ಹೆಚ್ಚಿನವರು 'ಥ್ರೀ ಈಡಿಯಟ್ಸ್' ಸಿನಿಮಾದಿಂದ ಪ್ರಸಿದ್ಧವಾಗಿರುವ ಪ್ಯಾಂಗಾಂಗ್ ಲೇಕ್, ಲೇಹ್‌ನ ಬೌದ್ಧ ಮಂದಿರಗಳು, ಸ್ತೂಪಗಳು,